ಓ.ಎಸ್.57/2019
ಪಿಡಬ್ಲ್ಯೂ: 1

ಇಂದು ದಿನಾಂಕಃ.17.02.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 3 ರವರ ಪರ ಶ್ರೀ ವಿ.ಟಿ.ಟಿ., ವಕೀಲರಿಂದಃ

7. ದಾವಾ ಶೆಡ್ಯೂಲ್ 1 ರಿಂದ 3 ನೇ ಆಸ್ತಿಗಳನ್ನು ನನ್ನ ತಂದೆ ಖರೀದಿ ಮಾಡಿರುವುದು ಗೊತ್ತು, ಆದರೆ ಯಾವಾಗ ಮತ್ತು ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ 4 ರಿಂದ 11 ರ ಆಸ್ತಿಗಳನ್ನು ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿದೆಯಾ ಅಂದರೆ ಸಾಕ್ಷಿಯು ನನಗೆ ಮೊದಲು ಹೇಳಿದ ಸರ್ವೆ ನಂಬರ್ ಗಳು ಗೊತ್ತು, ಈಗ ಹೇಳಿದ ಸರ್ವೆ ನಂಬರ್ ಗಳು ನನಗೆ ಗೂತ್ತಿಲ್ಲ ಎಂದು ನುಡಿಯುತ್ತಾರೆ. ಅವುಗಳನ್ನು ಎಷ್ಟು ಹಣಕ್ಕೆ ಮಾರಾಟ ಮಾಡಲಾಗಿದೆ ಎಂಬುದು ಸಹ ನನಗೆ ಗೊತ್ತಿಲ್ಲ. ಅವುಗಳನ್ನು ಯಾರಿಗೆ ಮಾರಾಟ ಮಾಡಲಾಗಿದೆ ಅಂದರೆ ಸಾಕ್ಷಿಯು ನನಗೆ ಸರ್ವೆ ನಂಬರ್ ಗಳು ಗೊತ್ತಿಲ್ಲದ ಕಾರಣ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ಗೊತ್ತಾ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ನನ್ನ ಅಜ್ಜನ ಆಸ್ತಿ ಅವರಿಗೆ ಹೋಗಿದೆ ಎಂದು ಗೊತ್ತು ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ 4 ನನ್ನ ತಾಯಿಯ ಸಂಬಂಧಿಕರು ಅಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಬಗ್ಗೆ ಮಾಹಿತಿಗಳು ನನಗೆ ಪ್ರತಿವಾದಿ 1 ಮತ್ತು 2 ರವರಿಂದ ಗೊತ್ತಾಗಿರುತ್ತದೆ. ದಾವಾ ಆಸ್ತಿಗಳ ಬಗ್ಗೆ ದಾಖಲಾತಿಗಳನ್ನು ಈ ದಾವೆ ಸಲ್ಲಿಸುವ ಕೆಲವು ತಿಂಗಳುಗಳ ಮುಂಚೆ ಪಡೆದುಕೊಂಡಿರುತ್ತೇನೆ.

8. ನಿಪಿ-3 ರಿಂದ 5 ಪಹಣಿ ಪತ್ರಿಕೆಗಳನ್ನು 2015 ರಲ್ಲಿ ಪಡೆದುಕೊಳ್ಳಲಾಗಿದೆ ಅಂದರೆ ಸಾಕ್ಷಿಯು ಆ ದಾಖಲಾತಿಗಳ ಮೇಲೆ ದಿನಾಂಕಃ03.03.2015 ಎಂದು ಇರುವುದು ನಿಜ ಆದರೆ ಅವುಗಳನ್ನು ನನ್ನ ತಾಯಿಯಾದ ಪ್ರತಿವಾದಿ 2 ರವರಿಂದ ಪಡೆದುಕೊಂಡಿರಬಹುದು. ಅವರು ತೆಗೆದುಕೊಂಡ ಕಾಲಕ್ಕೆ ನಾನು ಓದುತ್ತಿದ್ದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನನ್ನ ತಂದೆ ತಾಯಿಯಿಂದ ಪಡೆದುಕೊಂಡಿರುತ್ತೇನೆ, ಆದರೆ ಪ್ರಕರಣವನ್ನು ನಾನೇ ದಾಖಲಿಸಿರುತ್ತೇನೆ. ದಾವಾ ಶೆಡ್ಯೂಲ್ 4 ರಿಂದ 11 ಆಸ್ತಿಗಳನ್ನು ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದಾರೆ ಅಂದರೆ ಸಾಕ್ಷಿಯು ಆ ಬಗ್ಗೆ ಪ್ರತಿವಾದಿ 1 ರವರನ್ನು ನಾನು ಕೇಳಿದ್ದೇನೆ ಆದರೆ ಅವರಿಂದ ಸರಿಯಾದ ಉತ್ತರ ನನಗೆ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ 1 ರಿಂದ 3 ರ ಆಸ್ತಿಗಳು

ದೇವೃಂದದಿಂದ ದೂರ ಇದೆ ಅಂದರೆ ಸರಿ. ದಾವಾ ಶೆಡ್ಯೂಲ್ 4 ರಿಂದ 11 ಆಸ್ತಿಗಳು ನಮ್ಮ ಊರಿಗೆ ಬಹಳ ಹತ್ತಿರದಲ್ಲಿ ಇವೆ ಅಂದರೆ ಸಾಕ್ಷಿಯು ಅವುಗಳನ್ನು ತೆಗೆದುಕೊಂಡಾಗ ಮತ್ತು ಮಾರಾಟ ಮಾಡಿದಾಗ ನಾನು ಬಹಳ ಚಿಕ್ಕವಳಾಗಿದ್ದ ಕಾರಣದಿಂದ ಆ ಆಸ್ತಿಗಳು ಎಲ್ಲಿವೆ ಎಂದು ನನಗೆ ಸ್ಪಷ್ಟವಾಹಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸುಮಾರು ಐದಾರು ವರ್ಷ ವಯಸ್ಸಿನವಳಿದ್ದಾಗ ದಾವಾ ಆಸ್ತಿಗಳಿಗೆ ಹೋಗಿದ್ದೆ. ದಾವಾ ಶೆಡ್ಯೂಲ್ 1 ರಿಂದ 11 ರ ಆಸ್ತಿಗಳನ್ನು ಯಾವ ಕಾರಣಕ್ಕಾಗಿ ಮಾರಾಟ ಮಾಡಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿಯು ನಾನು ನನ್ನ ತಾಯಿ ತಂದೆಯನ್ನು ಕೇಳಿದ್ದೇನೆ, ಆದರೆ ಅವರು ನನಗೆ ಸರಿಯಾಗಿ ತಿಳಿಸಿಲ್ಲ ಎಂದು ನುಡಿಯುತ್ತಾರೆ.

9. ನಾನು, 2 ನೇ ವಾದಿ ಮತ್ತು 2 ನೇ ಪ್ರತಿವಾದಿ ಸೇರಿ 1 ನೇ ಪ್ರತಿವಾದಿಯ ವಿರುದ್ಧ ಜೀವನಾಂಶಕ್ಕಾಗಿ ಕ್ರಿಮಿನಲ್ ಮಿಸಲೇನಿಯಸ್ ನಂ. 109/2019 ರಂತೆ ಪ್ರಕರಣ ದಾಖಲಿಸಿದ್ದೆವು ಅಂದರೆ ಸರಿ. ಆ ಪ್ರಕರಣದಲ್ಲಿ ಪ್ರತಿವಾದಿ 2 ನನ್ನ ಮತ್ತು 2 ನೇ ವಾದಿಯ ಪರವಾಗಿ ಸಾಕ್ಷ್ಯ ನುಡಿದಿದ್ದಾರೆ ಅಂದರೆ ಸರಿ. ಆ ಸಾಕ್ಷ್ಯದಲ್ಲಿ 2 ನೇ ಪ್ರತಿವಾದಿ ರವರು ಹಾಗೂ 1 ನೇ ಪ್ರತಿವಾದಿ ಸೇರಿ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ ಅಂದರೆ ಸರಿ. ಆಸ್ತಿಗಳನ್ನು ಮಾರಾಟ ಮಾಡಿದ ನಂತರ ಇಬ್ಬರು ಸೇರಿ ಮಾತನಾಡಿಕೊಂಡು ವಾದಿಗಳಾದ ನಮ್ಮೊಂದಿಗೆ ಬೆಂಗಳೂರಿಗೆ ಸ್ಥಳಾಂತರವಾಗಿರುತ್ತಾರೆ ಎಂದು ನನ್ನ ತಾಯಿ ಆ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಅಂದರೆ ಸಾಕ್ಷಿಯು ನನಗೆ ಆಸ್ತಿಗಳನ್ನು ಯಾವಾಗ ಮಾರಾಟ ಮಾಡಿದ್ದಾರೆ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ಈ ದಿನ ನಾನು ಮತ್ತು 2 ನೇ ಪ್ರತಿವಾದಿಯಾದ ನನ್ನ ತಾಯಿ ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದೇವೆ ಅಂದರೆ ಸರಿ. ಮೇಲ್ಕಂಡ ಕ್ರಿಮಿನಲ್ ಮಿಸಲೇನಿಯಸ್ ಪ್ರಕರಣದಲ್ಲಿ ನನ್ನ ಮೂಲಕ ಈ ದಾವೆಯನ್ನು ದಾಖಲಿಸಿರುವುದಾಗಿ ನನ್ನ ತಾಯಿ ಸಾಕ್ಷ್ಯ ನುಡಿದಿದ್ದಾರೆ ಅಂದರೆ ಸರಿ.

10. ನಾನು ಸಣ್ಣ ವಯಸ್ಸಿನಲ್ಲಿ ಇದ್ದಾಗ ನನ್ನ ತಂದೆ ಕೃಷಿ ಚಟುವಟಿಕೆಗಳಿಗೆ ಅವಶ್ಯಕವಾದ ಅಂಗಡಿಯನ್ನು ಇಟ್ಟುಕೊಂಡು ಫಾರ್ಮರ್ಸ್ ಸರ್ವೀಸ್ ಫೋರಂ ಎಂಬ ಅಂಗಡಿಯನ್ನು ನಡೆಸುತ್ತಿದ್ದರು ಅಂದರೆ ಸರಿ. ಅದರಿಂದ ನನ್ನ ತಂದೆಗೆ ಒಳ್ಳೆಯ ವ್ಯಾಪಾರ ಆಗುತ್ತಿತ್ತು ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಕ್ರಿಮಿನಲ್ ಮಿಸಲೇನಿಯಸ್ ನಂ. 109/2019 ರ ಪ್ರಕರಣದಲ್ಲಿ ಪ್ರತಿವಾದಿ 1 ರವರಾದ ನನ್ನ ತಂದಗೆ ಪ್ರತಿ ತಿಂಗಳಿಗೆ ರೂ. 2,00,000/- ಆದಾಯ ಇದೆ ಎಂದು ನನ್ನ ಪರವಾಗಿ ನನ್ನ ತಾಯಿ ಸಾಕ್ಷ್ಯ ನುಡಿದಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನನ್ನ ಪರವಾಗಿ ಸಾಕ್ಷವನ್ನು

ನನ್ನ ತಾಯಿ ನುಡಿದಿದ್ದಾರೆ ಅಂದರೆ ಸರಿ. ಪ್ರತಿವಾದಿ 1 ಆರಂಭ ಎಂಬ ಪತ್ರಿಕೆಯನ್ನು ಸಹ ನಡೆಸುತ್ತಿದ್ದರು ಅಂದರೆ ಸರಿ. ಅದೇ ರೀತಿ ಆ ಪ್ರಕರಣದಲ್ಲಿ ನನ್ನ ತಾಯಿ, 1 ನೇ ಪ್ರತಿವಾದಿ ಅವರ ಪರವಾಗಿ ಸರ್ವೆ ನಂ. 249 ರಲ್ಲಿ 4 ಎಕರೆ 38 ಗುಂಟೆ ಆಸ್ತಿಯನ್ನು ಕ್ರಯದ ಕರಾರು ನೋಂದಣಿ ಮೂಲಕ ಬಿಟ್ಟು ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಗೆ ಸಂಬಂಧಪಟ್ಟಂತೆ ದಿನಾಂಕಃ28.05.2012 ರಂದು ಜಿ.ಪಿ.ಎ., ಬರೆದುಕೊಟ್ಟಿರುವ ವಿಚಾರವನ್ನು ಸಹ ನನ್ನ ತಾಯಿ ಒಪ್ಪಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಜೀವನಾಂಶದ ಅರ್ಜಿಯಲ್ಲಿ ರಾಜಿಯಾದಾಗ ರೂ. 10,00,000/- ವನ್ನು 4 ನೇ ಪ್ರತಿವಾದಿಯ ತಮ್ಮ ಪ್ರತಿವಾದಿ 1 ರವರ ಮೂಲಕ ನೀಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ದಿನ ಪ್ರತಿವಾದಿ 1 ಸಹ ನ್ಯಾಯಾಲಯಕ್ಕೆ ಬಂದಿದ್ದರು. ನಾನು, ಪ್ರತಿವಾದಿ 1 ಮತ್ತು 2 ರವರು ಶಾಮೀಲಾಗಿ ಆಸ್ತಿಯನ್ನು ಮಾರಾಟ ಮಾಡಿದ ನಂತರ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಈ ರೀತಿಯ ದಾವೆಯನ್ನು ಸಲ್ಲಿಸಿದ್ದೇವೆ ಅಂದರೆ ಸುಳ್ಳು.

11. ದಿನಾಂಕಃ18.06.2012 ರ ಕ್ರಯ ಪತ್ರದಲ್ಲಿ ಆಸ್ತಿಗಳನ್ನು ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಲಾಗಿದೆ ಎಂದು ನಮೂದು ಮಾಡಲಾಗಿದೆ ಅಂದರೆ ಸಾಕ್ಷಿಯು ನನಗೆ ಮಾರಾಟ ಮಾಡಿದ್ದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೇರೆ ಆಸ್ತಿಗಳನ್ನು ಖರೀದಿ ಮಾಡುವ ಸಲುವಾಗಿ ದಾವಾ ಶೆಡ್ಯೂಲ್ 4 ರಿಂದ 11 ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದು ಆ ಕ್ರಯ ಪತ್ರದಲ್ಲಿ ನಮೂದು ಮಾಡಲಾಗಿಲ್ಲ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ11.02.2015 ರಂದು ದಾವಾ ಶೆಡ್ಯೂಲ್ 1 ರಿಂದ 3 ಆಸ್ತಿಗಳ ಸಂಬಂಧ ಆಗಿರುವ ಕ್ರಯ ಪತ್ರಗಳಲ್ಲಿ ಅವುಗಳು ಸ್ವಯಾರ್ಜಿತ ಆಸ್ತಿಗಳಾಗಿದ್ದು, ಬೇರೆ ಆಸ್ತಿಗಳನ್ನು ಖರೀದಿ ಮಾಡಲು ಮತ್ತು ಬ್ಯಾಂಕಿನಲ್ಲಿ ಮಾಡಿರುವ ಸಾಲವನ್ನು ತೀರಿಸಲು ಮಾರಾಟ ಮಾಡುತ್ತಿರುವುದಾಗಿ ನಮೂದು ಇದೆ ಅಂದರೆ ಸಾಕ್ಷಿಯು ಅವುಗಳು ಸ್ವಯಾರ್ಜಿತ ಆಸ್ತಿಗಳಲ್ಲ ಮತ್ತು ಅವುಗಳನ್ನು ಮಾರಾಟ ಮಾಡಿದ ನಂತರ ಬೇರೆ ಆಸ್ತಿಗಳನ್ನು ಖರೀದಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ಸಾಲ ತೀರುವಳಿ ಮಾಡಿರುವ ಬಗ್ಗೆ ನಾನು ವಿಚಾರಣೆ ಮಾಡಿದಾಗ ಸರಿಯಾದ ಮಾಹಿತಿ ನೀಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಈಗಲು ಸಹ ಬೇರೆ 10 ಎಕರೆ ಜಮೀನು ಇದೆ ಅಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಕ್ರಯ ಪತ್ರಗಳಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಆ ದಾಖಲಾತಿಗಳಲ್ಲಿ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ದಾವಾ ಶೆಡ್ಯೂಲ್ 1 ರಿಂದ 3 ಆಸ್ತಿಗಳನ್ನು ಖರೀದಿ ಮಾಡಿರುವ ಬಗ್ಗೆ ನಮೂದು ಇಲ್ಲಾ ಅಂದರೆ ಸಾಕ್ಷಿಯು

ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ಮತ್ತು 2 ರವರು ನನ್ನ ಮೂಲಕ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದಾರೆ ಅಂದರೆ ಸುಳ್ಳು. ಆ ಕಾರಣದಿಂದಲೇ ಆಸ್ತಿಗಳ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇಲ್ಲಾ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸುಳ್ಳು. ದಾವಾ ಶೆಡ್ಯೂಲ್ 1 ರಿಂದ 3 ನೇ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾದ್ದರಿಂದ ಅವುಗಳ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇಲ್ಲಾ ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 4 ರಿಂದ 11 ಆಸ್ತಿಗಳನ್ನು ಮಾರಾಟ ಮಾಡಿದ ಕ್ರಯ ಪತ್ರದಲ್ಲಿ ಬೇರೆ ಆಸ್ತಿಗಳನ್ನು ಖರೀದಿ ಮಾಡಲು ಆಸ್ತಿಗಳನ್ನು ಮಾರಾಟ ಮಾಡಿರುವ ಬಗ್ಗೆ ನಮೂದು ಇಲ್ಲಾ ಅಂದರೆ ನನಗೆ ಗೊತ್ತಿಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹಳಲ್ಲ ಅಂದರೆ ಸರಿಯಲ್ಲ.

12. 3 ನೇ ಪ್ರತಿವಾದಿಯು ರೂ. 72,00,000/- ನ್ನು ಕೊಟ್ಟು ದಾವಾ ಶೆಡ್ಯೂಲ್ 1 ರಿಂದ 3 ನೇ ಆಸ್ತಿಗಳನ್ನು ಖರೀದಿಸಿದ್ದಾರೆ ಅಂದರೆ ಸರಿ. ಆ ನಂತರ ನನ್ನ ತಾಯಿ ಖಾತೆ ಬದಲಾವಣೆಗೆ ತಕರಾರು ಮಾಡಿದಾಗ ಮಾನವೀಯತೆ ದೃಷ್ಟಿಯಿಂದ ಪ್ರತಿಫಲದ ಹಣದಲ್ಲಿ ರೂ. 25,00,000/- ವನ್ನು 3 ನೇ ಪ್ರತಿವಾದಿ ನನ್ನ ತಾಯಿಗೆ ನೀಡಿದ್ದಾರೆ ಅಂದರೆ ಸುಳ್ಳು. ನನ್ನ ಮತ್ತು 1 ನೇ ವಾದಿಯ ಪರವಾಗಿ ಆ ಹಣವನ್ನು ನನ್ನ ತಾಯಿ ತೆಗೆದುಕೊಂಡಿದ್ದಾರೆ ಅಂದರೆ ಸುಳ್ಳು. ಜೀವನಾಂಶದ ಪ್ರಕರಣದಲ್ಲಿ ರಾಜಿ ಮಾಡಿಕೊಂಡಾಗ ಈ ಪ್ರಕರಣವನ್ನು ವಾಪಾಸ್ಸು ತೆಗೆದುಕೊಳ್ಳುತ್ತೇವೆ ಎಂದು ನಾನು ಮತ್ತು ನನ್ನ ತಾಯಿ ಒಪ್ಪಿಕೊಂಡಿದ್ದೆವು ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿ 4 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xxx

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ